<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.</u>

# <u>ಕ್ರಿಮಿನಲ್ ಮೊಕದ್ದಮೆ ಸಂಖ್ಯೆ. 530/2021</u>

ಪ್ರಾ.ಸಾ.ಃ 1
ಚಾ.ಸಾ.ಃ 1

ಹೆಸರು ಃ ಕುಮಾರ್ ಡಿ
ತಂದೆಯ ಹೆಸರು ಃ ದಾಸಪ್ಪ
ವಯಸ್ಸು ಃ 63 ವರ್ಷ
ಉದ್ಯೋಗ ಃ ನಿವೃತ್ತ ನೌಕರ
ವಿಳಾಸ ಃ ಮೈಸೂರು

… ………………………………………………………………………………… …

ದಿನಾಂಕ 30 ನೇ ಜನವರಿ 2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ</u> ಃ -

1. ನಾನು 2019 ರಿಂದ 2022 ಸೆಪ್ಟೆಂಬರ್ ತನಕ ಪೊನ್ನಂಪೇಟೆ ಠಾಣೆಯಲ್ಲಿ ಪಿ. ಎಸ್. ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 05.05.2021 ರಂದು ರಾಜ್ಯದಲ್ಲಿ ಕೋವಿಡ್ ಸಂಬಂಧ ಲಾಕ್ ಡೌನ್ ಆದ ಕಾರಣ ಇಲಾಖಾ ವಾಹನದಲ್ಲಿ ನಾನು, ಚಾಸಾ 2 ರಿಂದ 6 ಪೊನ್ನಂಪೇಟೆ ನಗರದಲ್ಲಿ ಗಸ್ತು ಮಾಡುತ್ತಿರುವಾಗ ಸಮಯ ಬೆ. 04.30 ಗಂಟೆಗೆ ಮತ್ತೂರು ಗ್ರಾಮದಿಂದ ಯಾರೂ ಕಳ್ಳರು ಗೋವುಗಳನ್ನು ಕಳುವು ಮಾಡಿ ಅಕ್ರಮವಾಗಿ ಒಂದು ವಾಹನದಲ್ಲಿ ತುಂಬಿಸಿಕೊಂಡು ಕೇರಳ ರಾಜ್ಯ ಕಸಾಯಿ ಖಾನೆಗೆ ಮಾರಾಟ ಮಾಡಲು ಕಳ್ಳ ಸಾಗಾಣಿಕೆ ಮಾಡುತ್ತಿರುವುದಾಗಿ ದೊರೆತ ಖಚಿತ ಮಾಹಿತಿ ಮೇರೆಗೆ ಬಾತ್ಮಿಯನ್ನು ಪತ್ತೆ ಹಚ್ಚುವ ಸಲುವಾಗಿ ಸಮಯ ಬೆ. 05.00 ಗಂಟೆಗೆ ಠಾಣೆಗೆ ಬಂದು ಸ್ವ ವರದಿ ತಯಾರಿಸಿ ಪ್ರಕರಣ ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

3. ಪೊನ್ನಂಪೇಟೆ ಠಾಣಾ ಸರಹದ್ದಿಗೆ ಸೇರಿದ ಮತ್ತೂರು ಗ್ರಾಮದ ಕಿರುಗೂರು ಮತ್ತು ಪೊನ್ನಂಪೇಟೆ ಮುಖ್ಯ ರಸ್ತೆಯ ಜಂಕ್ಷನ್ ಬಳಿ ಬರುತ್ತಿದ್ದ ಕೆ ಎ 18 ಬಿ 3184 ಪಿಕಪ್ ವಾಹನವನ್ನು ತಡೆದು ಪರಿಶೀಲಿಸಲಾಗಿ ಹಾಗೂ ಪಂಚರವನ್ನು ಬರಮಾಡಿಕೊಂಡು ಪಂಚರಾದ ಚಾಸಾ 9 ಮತ್ತು 10 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ ರುತ್ತೇನೆ.. ಒಂದು ಬಿಳಿ ಬಣ್ಣ ಮತ್ತು ಕಪ್ಪು ಬಣ್ಣದ ಪಟ್ಟೆ ಇರುವ ಎತ್ತು

ಮತ್ತು ಕಪ್ಪು ಬಣ್ಣದ ಪಟ್ಟೆ ಇರುವ ಹೆಣ್ಣು ಕರು ಇರುವುದು ಕಂಡು ಬಂದಿರುತ್ತದೆ. ಪರಿಶೀಲಿಸಲಾಗಿ ಹಾಗೂ ಪಂಚರವನ್ನು ಬರಮಾಡಿಕೊಂಡು ಪಂಚರ ಸಮಕ್ಷಮ ವಶಕ್ಕೆಪಡೆಯಲಾಯಿತು.

ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)

ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)